ಸಂಪುಟ : 40 ಸಂಚಿಕೆ:305 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 01 ಡಿಸೆಂಬರ್ 2017 ಶುಕ್ರವಾರ POST REG NO . L-2/RNP- 364/TMR/2015-17 ಪುಟಗಳು :10 ಬೆಲೆ ₹ 2.50

ತುಮಕೂರು | Tumakuru

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳ ಪ್ರಾದೇಶಿಕ ದಿನಪತ್ರಿಕೆ

# ಪ್ರಜಾ ಪ್ರಗತಿ

ಉಪ ಸಂಪಾದಕರು : ಟಿ.ಎನ್.ಮಧುಕರ್

ಸಂಪಾದಕರು : ಎಸ್. ನಾಗಣ್ಣ

E-mail : For News: prajapragathi1@gmail.com
For Advertisements: prajapragathiadds@gmail.com
Web : prajapragathi.com



ಇಂದು ನಾಡಿನಾದ್ಯಂತ ಭಕ್ತರಿಂದ ಹನುಮ ಜಯಂತಿ ಆಚರಣೆ

5 ತ್ರೈಮಾಸಿಕದ ನಂತರ ಸೆಪ್ಟಂಬರ್ ತ್ರೈಮಾಸಿಕದಲ್ಲಿ ಜಿಡಿಪಿ ದರ ಶೇ.6.3 ಏರಿಕೆ
ವಿವರ : ಪುಟ 5






ಡಿ.17ಕ್ಕೆ ಸ್ಥಳೀಯ ಸಂಸ್ಥೆಗಳಿಗೆ ಉಪ ಚುನಾವಣೆ: ರಾಜ್ಯ ಚುನಾವಣಾ ಆಯೋಗ
ವಿವರ : ಪುಟ 5

ವೆಯ್ಟ್ ಲಿಫ್ಟಿಂಗ್ ವಿಶ್ವಚಾಂಪಿಯನ್‌ಷಿಪ್ ನಲ್ಲಿ ಭಾರತಕ್ಕೆ ಚಿನ್ನ ತಂದ ಮೀರಾಬಾಯಿ ಚಾನು
ವಿವರ : ಪುಟ 10



Gold 916 ₹ 2785/–
Silver ₹ 41500/–
ಸೂರ ಜ್ಯುಯಲರ್ಸ್
Ashoka Road, Tumkur
Ph: 0816 4022274

## ತುಮಕೂರು ಮಹಾನಗರ ಪಾಲಿಕೆಗೆ ಡಿ.ಎಂ.ಎ. ಅಧಿಕಾರಿ ಭೇಟಿ-ತನಿಖೆ:

# ‘ಲಕ್ಷಾಂತರ ರೂ. ಡೀಲಿಂಗ್’ ದೂರು: 3 ಕಡತ ವಶ?

ತುಮಕೂರು: ಜೆ.ಡಿ.ಎಸ್. ಆಡಳಿತ ನಡೆಸುತ್ತಿರುವ ತುಮಕೂರು ಮಹಾನಗರ ಪಾಲಿಕೆಯಲ್ಲಿ ಮೂರು ಪ್ರತ್ಯೇಕ ಪ್ರಕರಣಗಳಲ್ಲಿ ''ಲಕ್ಷಾಂತರ ರೂ.ಗಳ ಡೀಲಿಂಗ್'' ನಡೆದಿದೆ. ಭಾರಿ ದೊಡ್ಡ ಪ್ರಮಾಣದ ಅವ್ಯವಹಾರ, ಅಕ್ರಮ, ಭ್ರಷ್ಟಾಚಾರ ಆಗಿದ್ದು, ಪಾಲಿಕೆಯ ಸಂಪನ್ಮೂಲಕ್ಕೆ ಪಂಗನಾಮ ಹಾಕಲಾಗಿದೆ ಎಂಬ ಆರೋಪ ಹಾಗೂ ದೂರಿನ ಹಿನ್ನೆಲೆಯಲ್ಲಿ, ರಾಜ್ಯ ಪೌರಾಡಳಿತ ನಿರ್ದೇಶನಾಲಯದ ಹಿರಿಯ ಅಧಿಕಾರಿಯೊಬ್ಬರು ತುಮಕೂರು ಮಹಾನಗರ ಪಾಲಿಕೆಯ ಕಚೇರಿಗೆ ಭೇಟಿ ನೀಡಿ ತನಿಖೆ ನಡೆಸಿದ್ದಲ್ಲದೆ, ಸಂಬಂಧಿಸಿದ ಪ್ರಕರಣದ ಮೂರು ಕಡತಗಳನ್ನು ಒಯ್ದಿರುವರೆಂದು ವರದಿಯಾಗಿದೆ.

ಬೆಂಗಳೂರಿನ ಪೌರಾಡಳಿತ ನಿರ್ದೇಶನಾಲಯದ ಉಪನಿರ್ದೇಶಕರ ಸ್ಥಾನಮಾನದ ಅಧಿಕಾರಿ ಎಸ್. ಚಂದ್ರಶೇಖರ್ ಅವರು ನ.29 ರಂದು ತುಮಕೂರು ಮಹಾನಗರ ಪಾಲಿಕೆ ಕಚೇರಿಗೆ ಆಗಮಿಸಿ, ದಿನವಿಡೀ ಅಧಿಕಾರಿಗಳೊಂದಿಗೆ ಚರ್ಚಿಸಿ, ಅಂತಿಮವಾಗಿ 3 ಕಡತಗಳನ್ನು ವಶಕ್ಕೆ ತೆಗೆದುಕೊಂಡು ತನಿಖೆಗಾಗಿ ಒಯ್ದರೆಂದು ಮೂಲಗಳು ಖಚಿತಪಡಿಸಿವೆ. ಈ ಬೆಳವಣಿಗೆಯು ಪಾಲಿಕೆಯ ಅಧಿಕಾರಿ-ನೌಕರರ ವಲಯದಲ್ಲಿ ತೀವ್ರ ಸಂಚಲನ ಉಂಟುಮಾಡಿದ್ದು, ಪಾಲಿಕೆಯೊಳಗಿನ ಭ್ರಷ್ಟಾಚಾರಗಳು ಇದೀಗ ಸಾರ್ವಜನಿಕ ಚರ್ಚೆಗೆ ಆಸ್ಪದವಾಗುತ್ತಿದೆ.

ಮಹಾನಗರ ಪಾಲಿಕೆಯಿಂದ ಶೇ.24.10 ನಿಧಿಯಲ್ಲಿ ಬಡವರಿಗೆ ಅಡಿಗೆ ಅನಿಲ ಸಿಲಿಂಡರ್ ಮತ್ತು ಸ್ಟೌವ್ ವಿತರಣೆಯ ಸಮಗ್ರ ಕಡತ; ತುಮಕೂರು ನಗರದ ಪ್ರಮುಖ ರಸ್ತೆಗಳಲ್ಲಿ ವಿದ್ಯುತ್ ಕಂಬಗಳಿಗೆ ಅಳವಡಿಸಿರುವ ಜಾಹಿರಾತು ಫಲಕಗಳ ಸಮಗ್ರ ಕಡತ ಮತ್ತು ಪೀಠೋಪಕರಣಗಳ ಖರೀದಿಯ ಸಮಗ್ರ ಕಡತ- ಈ ರೀತಿ ಮೂರು ಪ್ರಕರಣಗಳ ಕಡತವನ್ನು ತನಿಖಾಧಿಕಾರಿ ಒಯ್ದಿದ್ದು, ಈ ಬೆಳವಣಿಗೆಯು ಮಹಾನಗರ ಪಾಲಿಕೆಯ ಆಡಳಿತದಲ್ಲಿ ತೀವ್ರ ಕಂಪನ ಉಂಟುಮಾಡಿದೆ ಎನ್ನಲಾಗುತ್ತಿದೆ.




ಬೆಳಗ್ಗೆ ಬಂದ ಅಧಿಕಾರಿ ಚಂದ್ರಶೇಖರ್ ಸಂಜೆವರೆಗೂ ಪಾಲಿಕೆ ಕಚೇರಿಯಲ್ಲಿದ್ದು ಈ ಮೂರು ಪ್ರಕರಣಗಳಿಗೆ ಸಂಬಂಧಿಸಿದಂತೆ ಕಡತಗಳನ್ನು ಪರಿಶೀಲಿಸಿ, ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ ಮಾಹಿತಿ ಪಡೆದುಕೊಂಡರು. ಕೊನೆಯಲ್ಲಿ ಸದರಿ ಮೂರು ಕಡತಗಳನ್ನು ತನಿಖೆಗಾಗಿ ಒಯ್ದರು. ಇವರು ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿಯಾಗಿದ್ದು, ಯಾವುದೇ ಪ್ರಭಾವಕ್ಕೆ ಒಳಗಾಗದೆ ಯಥಾವತ್ ವರದಿ ನೀಡುವಂತಹವರೆಂದೂ, ಇವರ ವರದಿ ಬಂದ ಬಳಿಕ ಯಾವ -ಯಾವ ಅಧಿಕಾರಿ / ನೌಕರರು ಬಲಿಪಶುಗಳಾಗುತ್ತಾರೋ ಎಂದು ಪಾಲಿಕೆಯ ಕೆಲ ಅಧಿಕಾರಿಗಳು ಆತಂಕದಿಂದ ಮಾತನಾಡಿಕೊಳ್ಳುತ್ತಿದ್ದಾರೆ.

**ಮೂರು ಪ್ರಕರಣಗಳು:** ಪ್ರಕರಣ-1: ಪಾಲಿಕೆಯು ಶೇ.24.10 ನಿಧಿಯಲ್ಲಿ 74 ಲಕ್ಷ ರೂ. ವಿನಿಯೋಗಿಸಿ, ನಗರಾದ್ಯಂತ ಬೃಹತ್ ಪ್ರಮಾಣದಲ್ಲಿ ಅಡಿಗೆ ಅನಿಲ ಸಿಲಿಂಡರ್ ಮತ್ತು ಸ್ಟೌವ್ ವಿತರಣೆ ಮಾಡಿದೆ. ಆದರೆ ಇದಕ್ಕೆ ನಿಯಮಾನುಸಾರವಾಗಿ ಪ್ರಕ್ರಿಯೆ ನಡೆಸದೆ, ಕಾನೂನು ನಿಯಮಾವಳಿಗಳನ್ನು ಸಾರಾಸಗಟಾಗಿ ಧಿಕ್ಕರಿಸಲಾಗಿದೆಯೆನ್ನಲಾಗಿದೆ. ಪೌರಾಡಳಿತ ನಿರ್ದೇಶನಾಲಯದ ಸೂಚನೆಗಳನ್ನು ಹಾಗೂ ಜಿಲ್ಲಾಧಿಕಾರಿಗಳ ಆದೇಶವನ್ನು ಕಡೆಗಣಿಸಲಾಗಿದೆ. ಕಾನೂನಿನ ಪ್ರಕಾರ ಟೆಂಡರ್ ಕರೆಯದೆ, ಕೊಟೇಷನ್ ಕರೆದು ''ತಮಗೆ ಬೇಕಾದವರನ್ನು'' ಆಯ್ಕೆ ಮಾಡಿ, ಕಾರ್ಯಾದೇಶ ನೀಡಲಾಗಿದೆ. ಈ ರೀತಿ ಮಾಡಲು ಲಕ್ಷಾಂತರ ರೂಗಳ ''ಡೀಲಿಂಗ್'' ಆಗಿದೆಯೆಂಬುದು ಈ ಪ್ರಕರಣದ ಗಂಭೀರ ಆರೋಪವಾಗಿದೆ.

ಪ್ರಕರಣ-2 :-ನಗರದ ಪ್ರಮುಖ ರಸ್ತೆಗಳಲ್ಲಿ ವಿದ್ಯುತ್ ಕಂಬಗಳಿಗೆ ಜಾಹಿರಾತು ಫಲಕ ಅಳವಡಿಸಲಾಗಿದೆ. ಬಿ.ಎಚ್.ರಸ್ತೆ, ಅಶೋಕ ರಸ್ತೆ, ಮಹಾತ್ಮಗಾಂಧಿ ರಸ್ತೆ, ಸೋಮೇಶ್ವರ ಪುರಂ ಮುಖ್ಯರಸ್ತೆ ಮತ್ತಿತರ ಪ್ರಮುಖ ರಸ್ತೆಗಳಲ್ಲಿ ಹಾಗೂ ಕೆಲ ವೃತ್ತಗಳಲ್ಲಿ ಇಂಥ ಫಲಕಗಳಿವೆ. ಇದನ್ನು ಗುತ್ತಿಗೆ ನೀಡುವಲ್ಲೂ ಭಾರಿ ''ಡೀಲಿಂಗ್'' ಮತ್ತು ''ಗೋಲ್‌ಮಾಲ್'' ನಡೆದಿದೆಯೆನ್ನಲಾಗಿದೆ. ಈ ಗುತ್ತಿಗೆಯಿಂದ ಮಹಾನಗರ ಪಾಲಿಕೆಗೆ ವಾರ್ಷಿಕ ಸುಮಾರು ಒಂದು ಕೋಟಿ ರೂಪಾಯಿಗೂ ಮೀರಿದ ಸಂಪನ್ಮೂಲ ಸಂಗ್ರಹವಾಗುವುದೆಂಬುದು ಪಾಲಿಕೆಯ ಕಂದಾಯ ಶಾಖೆಯ ಅಂದಾಜಾಗಿತ್ತು. ಆದರೆ ಈ ಪ್ರಕರಣದಲ್ಲಿ ಕಂದಾಯ ಶಾಖೆಯ ಸಲಹೆಯನ್ನು ಸಾರಾಸಗಟು ತಿರಸ್ಕರಿಸಲಾಗಿದೆ. ಇಲ್ಲೂ ಸಹ ಯಾವುದೇ ಟೆಂಡರ್ ಕರೆಯದೆ, ಕೇವಲ 15 ರಿಂದ 20 ಲಕ್ಷ ರೂ. ಶುಲ್ಕ ಪಡೆದು ''ತಮಗೆ ಬೇಕಾದವರಿಗೆ'' ಕಾರ್ಯಾದೇಶ ನೀಡಲಾಗಿದೆ. ಇದರಲ್ಲೂ ''ಡೀಲಿಂಗ್'' ನಡೆದಿದ್ದು, ಪಾಲಿಕೆಗೆ ಸುಮಾರು ಒಂದು ಕೋಟಿ ರೂ.ಗಳಷ್ಟು ವಾರ್ಷಿಕ ನಷ್ಟ ಉಂಟಾಗುತ್ತಿದೆ ಎಂದು ಆರೋಪಿಸಲಾಗಿದೆ.

ಪ್ರಕರಣ-3 :-ಮಹಾನಗರ ಪಾಲಿಕೆ ಕಚೇರಿಗೆ ವಿವಿಧ ಉದ್ದೇಶಗಳಿಗಾಗಿ ಪೀಠೋಪಕರಣಗಳನ್ನು ಖರೀದಿಸಿದ್ದು, ಈ ನೆಪದಲ್ಲೂ ''ಗೋಲ್‌ಮಾಲ್'' ಆಗಿದೆಯೆಂಬ ಆರೋಪ ಕೇಳಿಬಂದಿದೆ.

**ಸಂಜೆವರೆಗೂ ಚರ್ಚೆ, ತನಿಖೆ:** ಬೆಳಗ್ಗೆ ಬಂದ ಅಧಿಕಾರಿ ಚಂದ್ರಶೇಖರ್ ಅವರು ಸಂಜೆವರೆಗೂ ಪಾಲಿಕೆ ಕಚೇರಿಯಲ್ಲಿದ್ದು, ಈ ಮೂರೂ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಡತಗಳನ್ನು ಪರಿಶೀಲಿಸಿ, ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ ಮಾಹಿತಿ ಪಡೆದುಕೊಂಡರು. ಕೊನೆಯಲ್ಲಿ ಸದರಿ ಮೂರು ಕಡತಗಳನ್ನು ತನಿಖೆಗಾಗಿ ಒಯ್ದರು ಎಂದು ಹೇಳಲಾಗಿದೆ. ಇವರು ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿಯಾಗಿದ್ದು, ಯಾವುದೇ ಪ್ರಭಾವಕ್ಕೆ ಒಳಗಾಗದೆ ಯಥಾವತ್ ವರದಿ ನೀಡುವಂತಹವರೆಂದೂ, ಇವರ ವರದಿ ಬಂದ ಬಳಿಕ ಯಾವ -ಯಾವ ಅಧಿಕಾರಿ/ನೌಕರರು ಬಲಿಪಶುಗಳಾಗುತ್ತಾರೋ ಎಂದು ಪಾಲಿಕೆಯ ಕೆಲ ಅಧಿಕಾರಿಗಳು ಆತಂಕದಿಂದ ಮಾತನಾಡಿಕೊಳ್ಳುತ್ತಿದ್ದಾರೆ.

ಪಾಲಿಕೆಯ ಆಯುಕ್ತ ಮಂಜುನಾಥ ಸ್ವಾಮಿ, ರೆವಿನ್ಯೂ ಅಧಿಕಾರಿ ತುಕಾರಾಂ ನಾಯಕ್, ಕಂದಾಯ ಶಾಖೆಯ ಶಂಕರಪ್ಪ, ಷಬ್ಬೀರ್, ಸುನೀತ, ರತ್ನಮ್ಮ, ಇಂಜಿನಿಯರಿಂಗ್ ಶಾಖೆಯ ಎಕ್ಸಿಕ್ಯುಟೀವ್ ಇಂಜಿನಿಯರ್ ಶ್ರೀನಿವಾಸ್, ಸಹಾಯಕ ಎಕ್ಸಿಕ್ಯುಟೀವ್ ಇಂಜಿನಿಯರ್ ಆಶಾ, ಜೂನಿಯರ್ ಇಂಜಿನಿಯರ್ ರಾಜು ಮೊದಲಾದ ಸಿಬ್ಬಂದಿ ವರ್ಗದವರು ಹಾಜರಿದ್ದು, ತನಿಖಾಧಿಕಾರಿಗಳಿಗೆ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡಿದ್ದಾರೆಂದು ಮೂಲಗಳು ಹೇಳುತ್ತಿವೆ.

**ಪಾಲಿಕೆಯಲ್ಲಿ ‘ಡೀಲಿಂಗ್ ದಂಧೆ’:** ''ಜೆಡಿಎಸ್ ಆಡಳಿತದ ಮಹಾನಗರ ಪಾಲಿಕೆಯಲ್ಲಿ ''ಡೀಲಿಂಗ್ ದಂಧೆ'' ಮಿತಿಮೀರಿದೆ. ಎಲ್ಲ ವಿಷಯಗಳಿಗೂ ''ಡೀಲಿಂಗ್'' ಆಗುತ್ತಿದೆ. ''ಡೀಲಿಂಗ್'' ಮಾಡುವುದನ್ನೇ ಕೆಲವರು ದಂಧೆ ಮಾಡಿಕೊಂಡಿದ್ದಾರೆ. ಅಧಿಕಾರಿ-ನೌಕರರನ್ನು

>>> 10ನೇ ಪುಟಕ್ಕೆ

## ವಿ.ವಿ. ಪದ ಬಳಸದಂತೆ ಯುಜಿಸಿ ತಾಕೀತು

ನವದೆಹಲಿ

ಬೆಂಗಳೂರಿನ ಕ್ರೈಸ್ತ ಮತ್ತು ಜೈನ ವಿಶ್ವವಿದ್ಯಾನಿಲಯಗಳು ಸೇರಿದಂತೆ ಕರ್ನಾಟಕ ರಾಜ್ಯದ 5 ಡೀಮ್ಡ್ ವಿಶ್ವವಿದ್ಯಾನಿಲಯಗಳು ವಿಶ್ವವಿದ್ಯಾನಿಲಯ ಪದವನ್ನು ಬಳಕೆಯಿಂದ ತೆಗೆದು ಹಾಕಬೇಕೆಂದು ಯು.ಜಿ.ಸಿ. ಸೂಚಿಸಿದೆ. ಮಂಗಳೂರಿನ ಎನಪೋವಾ ವಿಶ್ವವಿದ್ಯಾನಿಲಯ ಬೆಳಗಾವಿಯ ಕೆ.ಎಲ್.ಇ. ಅಕಾಡೆಮಿ, ಜೆ.ಎನ್.ಮೆಡಿಕಲ್ ಕಾಲೇಜು ಮಣಿಪಾಲ ಇವುಗಳಿಗೆ ಈ ಸೂಚನೆ ನೀಡಿದೆ.

## ಜಿ.ಎಸ್.ಟಿ. ತೆರಿಗೆ ವಿಲೀನ: ಸುಳಿವು




ನವದೆಹಲಿ

ಶೇಕಡ 10 ರಷ್ಟು ಜಿ.ಡಿ.ಪಿ. ಬೆಳವಣಿಗೆ ಸಾಧಿಸುವುದು ದೊಡ್ಡ ಸವಾಲಾಗಿದ್ದು, ಜಗತ್ತು ಹೇಗೆ ಚಲಿಸುತ್ತಿದೆ ಎಂಬುದರ ಮೇಲೆ ನಿಂತಿದೆ. ಕಳೆದ 3 ವರ್ಷಗಳಲ್ಲಿ ಭಾರತ ಶೇ.7 8 ರಷ್ಟು ಜಿ.ಡಿ.ಪಿ. ಬೆಳವಣಿಗೆ ಸಾಧಿಸಿದ್ದು, ಈಗ ಶೇ.10 ರಷ್ಟು ಸಾಧಿಸುವುದು ದೊಡ್ಡ ಸವಾಲಾಗಿದೆ ಎಂದಿದ್ದಾರೆ. ಶೇ.12 ರಷ್ಟು ಜಿ.ಎಸ್.ಟಿ. ತೆರಿಗೆ ದರ ಮತ್ತು ಶೇ.18 ರಷ್ಟು ತೆರಿಗೆ ದರವನ್ನು ವಿಲೀನಗೊಳಿಸುವ ಸುಳಿವು ನೀಡಿದ್ದಾರೆ.

## ಮೋದಿ ತಂತ್ರಗಳು ಸವಕಲು ನಾಣ್ಯ

ಹಾಸನ

ವಿವಾದಿತ ಗೋಹತ್ಯೆ ನಿಷೇಧ ವಾಪಸ್ ನಿರ್ಧಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ನರೇಂದ್ರ ಮೋದಿ ಅವರ ಎಲ್ಲಾ ತಂತ್ರಗಳು ಸವಕಲು ನಾಣ್ಯದಂತಾಗಿವೆ. ಇದು ಮನವರಿಕೆಯಾದ ಮೇಲೆ ಗೋಹತ್ಯೆ ನಿಷೇಧ ವಾಪಸ್ ಪಡೆಯುವ ನಿರ್ಧಾರಕ್ಕೆ ಬಂದಿರಬಹುದು ಎಂದಿದ್ದಾರೆ.

## ಸಿದ್ಧಾರೂಢ ಮಠಕ್ಕೆ ಕಾಜೋಲ್ ಭೇಟಿ

ಹುಬ್ಬಳ್ಳಿ

ಬಾಲಿವುಡ್ ನಟಿ ಕಾಜೋಲ್



ದೇವಗನ್ ಕುಟುಂಬ ಸಮೇತ ಸಿದ್ಧಾರೂಢ ಮಠಕ್ಕೆ ಭೇಟಿ ನೀಡಿದ್ದರು. ತಾಯಿ, ತಂಗಿ, ಪುತ್ರ ಸಮೇತ ಮಠಕ್ಕೆ ಬಂದು ಕೆಲ ಕಾಲ ಅಲ್ಲಿ ತಂಗಿದ್ದರು.

## ಅಂಕು ಡೊಂಕು

ಚಿನ್ನೇನಹಳ್ಳಿ ಶಿವರಾಜ್

ತೋಳ್ಬಲನಾ / ಹಣ ಬಲನಾ



ಸ್ವಾಮಿ.. ಮುಂದಿನ ಚುನಾವಣೆಯಲ್ಲಿ ನಿಮ್ಮ ಈ ಶಕ್ತಿ ಜನರು ಕೇಳುವುದಿಲ್ಲ, ಹಣದ ಶಕ್ತಿಯೊಂದೇ ಜನರ ಭಕ್ತಿ ಇರುವುದು.

## ದೇವಾಲಯ ಜಾಗದಲ್ಲಿ ಮನೆಗಳ ನಿರ್ಮಾಣ

# ಕೋರ್ಟ್ ಆದೇಶದ ಮೇರೆಗೆ ತೆರವು



ಕೊರಟಗೆರೆ

ದೇವಾಲಯದ ಜಾಗದಲ್ಲಿ ಅನಧಿಕೃತವಾಗಿ ಮನೆಗಳನ್ನು ನಿರ್ಮಾಣ ಮಾಡಿರುವುದನ್ನು ಜಿಲ್ಲಾ ನ್ಯಾಯಾಲಯದ ಆದೇಶದ ಮೇರೆಗೆ ತಹಸೀಲ್ದಾರ್ ರಾಜಣ್ಣ ನೇತೃತ್ವದಲ್ಲಿ ತೆರವುಗೊಳಿಸಿ ವಶಪಡಿಸಿಕೊಂಡ ಘಟನೆ ಗುರುವಾರ ನಡೆಯಿತು.

ಪಟ್ಟಣದ ರಾಜ್ಯ ಹೆದ್ದಾರಿಗೆ ಅಂಟಿಕೊಂಡಿರುವ ಶ್ರೀಚಂದ್ರಮೌಳೇಶ್ವರ ಸ್ವಾಮಿ ದೇವಾಲಯದ ಆಡಳಿತವನ್ನು ಜಿಲ್ಲಾ ನ್ಯಾಯಾಲಯದ ಆದೇಶದ ಮೇರೆಗೆ 1ಎಕರೆ 20ಕುಂಟೆ ದೇವಾಲಯದ ಜಾಗದಲ್ಲಿ ಅನಧಿಕೃತವಾಗಿ ನಿರ್ಮಿಸಲಾಗಿದ್ದ ಪೆಟ್ಟಿಗೆ ಅಂಗಡಿ, ಪಾನಿಪೂರಿ ಅಂಗಡಿ, ಕಬ್ಬಿನ ಹಾಲು ಪೆಟ್ಟಿಗೆ, ಮನೆಗಳು, ಸೈಕಲ್‌ಷಾಪ್, ಟೀಅಂಗಡಿಗಳನ್ನು ತೆರವು ಗೊಳಿಸಿ ಸರಕಾರದ ವಶಕ್ಕೆ ಪಡೆದುಕೊಂಡಿದ್ದಾರೆ. ದೇವಾಲಯದ ಅರ್ಚಕರ ಮನೆ ಮತ್ತು ಮಹಡಿಯ ಮನೆಯನ್ನು ಮಾತ್ರ ತೆರವು ಗೊಳಿಸದ ಹಾಗೇ ಉಳಿಸಿರುವುದು ಹಲವಾರು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ನ್ಯಾಯಾಲಯದ ಆದೇಶದಂತೆ ಅಬ್ದುಲ್‌ಮುನಾಫ್, ಕೆ.ಸೂರ್ಯನಾರಾಯಣಶೆಟ್ಟಿ, ನಾಗರಾಜಶೆಟ್ಟಿ ಇವರ ಸ್ವಾಧೀನ ಮತ್ತು ಅನುಭವದಲ್ಲಿರುವ ದೇವಾಲಯದ ಜಾಗ ಸೇರಿದಂತೆ ಸಾಮಿಲ್ ಬಿಟ್ಟು ಉಳಿದಂತೆ ದೇವಾಲಯದ ಆವರಣದಲ್ಲಿ ಇರುವ ವ್ಯಕ್ತಿಗಳನ್ನು ಕಾನೂನು ಬದ್ಧವಾಗಿ ಹೊರಗೆ ಹಾಕುವ ಮೂಲಕ ಕ್ರಮ ಕೈಗೊಳ್ಳಬೇಕು ಎಂಬ ಆದೇಶದ ಪ್ರಕಾರ ತಹಸೀಲ್ದಾರ್ ಪಾಲಿಸುವ ಮೂಲಕ ತೆರವು ಕಾರ್ಯಾಚರಣೆ ನಡೆಸಿದ್ದಾರೆ.

>>> 5ನೇ ಪುಟಕ್ಕೆ

# ನಿವೇಶನ ನೀಡಲು ಭೂ ಸ್ವಾಧೀನ ಪ್ರಕ್ರಿಯೆ ವಿಳಂಬ

ಮಧುಗಿರಿ

ತಾಲ್ಲೂಕಿನಲ್ಲಿನ ಅರ್ಹ ಫಲಾನುಭವಿಗಳಿಗೆ ನಿವೇಶನ ನೀಡಲು ಭೂ ಸ್ವಾಧೀನ ಪ್ರಕ್ರಿಯೆ ತಡವಾಗುತ್ತಿದ್ದು, ತಾಲ್ಲೂಕಿನಲ್ಲಿ ಬಹಳಷ್ಟು ಜನರಿಗೆ ನಿವೇಶನವಿಲ್ಲ. ಬಡ ಜನರಿಗೆ ನಿವೇಶನ ಒದಗಿಸಿಕೊಡದಿದ್ದರೆ ಹೇಗೆ ಎಂದು ಶಾಸಕ ಕೆ.ಎನ್.ರಾಜಣ್ಣ ಅಸಮಾಧಾನ ವ್ಯಕ್ತಪಡಿಸಿದರು.

ಪಟ್ಟಣದ ತಾ.ಪಂ. ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಕೆಡಿಪಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ಕಳೆದ 6 ತಿಂಗಳಿನಿಂದ ನಿವೇಶನ ನೀಡಲು ಉದ್ದೇಶಿಸಿದ್ದ ಭೂಸ್ವಾಧೀನ ಪ್ರಕ್ರಿಯೆ ನಡೆದಿಲ್ಲ. ಐ.ಡಿ.ಹಳ್ಳಿ, ತಾಡಿ, ಕವಣದಾಲ ಗ್ರಾಮದ ಭೂಸ್ವಾಧೀನ ಆಗಿಲ್ಲದೆ ನೆನಗುದಿಗೆ ಬಿದ್ದಿದ್ದು, ಕಡತವನ್ನು ಕಚೇರಿಯಲ್ಲಿಟ್ಟುಕೊಂಡು ಪೂಜೆ ಮಾಡುತ್ತಿದ್ದೀರಾ ಎಂದು ಅಸಮಾಧಾನ ವ್ಯಕ್ತಪಡಿಸಿದ ಶಾಸಕರು ಅರ್ಹ ಫಲಾನುಭವಿಗೆ ಮಾತ್ರ ನಿವೇಶನ ನೀಡಬೇಕೆಂದರು. ಅದಕ್ಕೆ ಉತ್ತರಿಸಿದ ಇಒ ಮಹಾಲಿಂಗಯ್ಯ 23 ಗ್ರಾಮಗಳಿಂದ 62 ಎಕರೆ ಜಮೀನು ಸ್ವಾಧೀನಕ್ಕೆ ಪಡೆದಿದ್ದು, 4 ಹಳ್ಳಿಯ ಭೂಮಿ ವಾಸಕ್ಕೆ ಯೋಗ್ಯವಾಗಿಲ್ಲ. ಉಳಿದ ಕೆಲಸವನ್ನು ಶೀಘ್ರವಾಗಿ ಮುಕ್ತಾಯ ಮಾಡುವುದಾಗಿ ತಿಳಿಸಿದರು.

> ಕ್ಷೇತ್ರದ ಸಂಪೂರ್ಣ ಅಭಿವೃದ್ಧಿಗೆ ಪಣ ತೊಟ್ಟಿದ್ದು, ಅಧಿಕಾರಿಗಳು ತಾಲ್ಲೂಕಿನಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಬೇಗ ಮುಗಿಸಿ ಜನತೆಗೆ ಸ್ಪಂದಿಸುವ ಮೂಲಕ ಮುಂದಿನ ಚುನಾವಣೆಯಲ್ಲಿ ನಾನು ಮತ್ತೆ ಶಾಸಕನಾಗಿ ಆಯ್ಕೆಯಾಗಲು ಸಹಕರಿಸಿ. ನಿವೇಶನ, ಸ್ಮಶಾನ, ನಿರಂತರ ಜ್ಯೋತಿ, ಭಾಗ್ಯ ಜ್ಯೋತಿ, ಗಂಗಾಕಲ್ಯಾಣದಂತಹ ಅಭಿವೃದ್ಧಿ ಕಾರ್ಯಗಳಿಗೆ ಅಧಿಕಾರಿಗಳು ಹೆಚ್ಚು ಒತ್ತು ನೀಡಬೇಕು.
>
> -ಕೆ.ಎನ್.ರಾಜಣ್ಣ, ಶಾಸಕರು.



ತಾ.ಪಂ ಸಭಾಂಗಣದಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಶಾಸಕ ಕೆ.ಎನ್.ರಾಜಣ್ಣ ಮಾತನಾಡುತ್ತಿರುವುದು.

ಶಾಲಾ ಕಟ್ಟಡಗಳ ದುರಸ್ಥಿಗಾಗಿ ಪಂಚಾಯ್ತಿಗಳಲ್ಲಿ 14 ನೇ ಹಣಕಾಸು ಖಾತೆಯಲ್ಲಿ ರೂ. 2 ಲಕ್ಷ ಮೀಸಲಿಡಬೇಕು. ಅದು ನಡೆಯದೆ ಹೇಗೆ ಅನುಮೋದನೆ ನೀಡುತ್ತೀರಾ. ಶೀಘ್ರವಾಗಿ ಮಳೆಗಾಲ ಪ್ರಾರಂಭದೊಳಗೆ ಎಲ್ಲಾ ಶಾಲೆಗಳ ದುರಸ್ತಿ ಕಾರ್ಯ ಮುಗಿಸಬೇಕು. ಪಂಚಾಯತ್ ರಾಜ್ ಹಾಗೂ ಬಿಇಓ ಸೇರಿ ಶೀಘ್ರವಾಗಿ ಕೆಲಸ ಕೈಗೆತ್ತಿಕೊಳ್ಳಬೇಕು ಎಂದು ಸೂಚಿಸಿದರು.

ನಿರ್ಮಿತಿ ಕೇಂದ್ರದಿಂದ ಯಾವುದೇ ಕಾಮಗಾರಿಗಳ ಪ್ರಗತಿ ಕಾಣುತ್ತಿಲ್ಲ ಎಂದು ಕಿಡಿ ಕಾರಿದ ಶಾಸಕರು, ಮಿಡಿಗೇಶಿಯ ವಾಲ್ಮೀಕಿ ಭವನ ಪ್ರಗತಿಯಾಗಿಲ್ಲ ಎಂದರು. ಅಧಿಕಾರಿ ಮಹಾದೇವಸ್ವಾಮಿ ಮಾತನಾಡಿ 2 ತಿಂಗಳಲ್ಲಿ ಪೂರ್ಣಗೊಳಿಸುತ್ತೇವೆ ಎಂದರು.

ಜಾತಿಗೊಂದು ರುದ್ರಭೂಮಿಯ ಬದಲು ಸಾಮೂಹಿಕ ರುದ್ರಭೂಮಿಗೆ ಚಾಲನೆ ನೀಡಬೇಕೆಂಬ ಚಿಂತನೆ ಹೊರಹಾಕಿದ ಶಾಸಕರು, ತಾಲ್ಲೂಕಿಗೆ 20 ಲಕ್ಷ ಅನುದಾನ ಸ್ಮಶಾನದ ಅಭಿವೃದ್ಧಿಗೆ ಬಂದಿದ್ದು, ಬೇಗ ಕೆಲಸ ಮುಗಿಸಬೇಕು. ಬಿ.ಸಿ.ಎಂ. ಹಾಸ್ಟೆಲ್‌ಗಳ ಸ್ಥಿತಿಗತಿಯ ಬಗ್ಗೆ ವಾರದಲ್ಲಿ ಮಾಹಿತಿ ಒದಗಿಸಲು ವಿಸ್ತರಣಾಧಿಕಾರಿ ಅನಂತರಾಜುಗೆ ತಿಳಿಸಿದರು.

ರೈತರಿಗೆ ಹಗಲಿನಲ್ಲಿ ವಿದ್ಯುತ್ ನೀಡಲು ಅಧಿಕಾರಿಗಳು ಚಿಂತಿಸಬೇಕು. ಭಾಗ್ಯಜ್ಯೋತಿ, ನಿರಂತರ ಜ್ಯೋತಿ ಹಾಗೂ ಗಂಗಾಕಲ್ಯಾಣ

>>> 7ನೇ ಪುಟಕ್ಕೆ

## ಗ್ರಾಮಪಂಚಾಯ್ತಿಗಳ ಸಂಪನ್ಮೂಲ ಕ್ರೋಡೀಕರಣದಲ್ಲಿ ನಿರ್ಲಕ್ಷ್ಯ

# 15 ಕೋಟಿಗೂ ಹೆಚ್ಚು ಭೂ ಕಂದಾಯ ಬಾಕಿ

♦ಭೂಷಣ್ ಮಿಡಿಗೇಶಿ
ತುಮಕೂರು

ಜಿಲ್ಲೆಯಲ್ಲಿರುವ ಹತ್ತು ತಾಲ್ಲೂಕುಗಳಲ್ಲಿಯೂ ಸಕಾಲದಲ್ಲಿ ಭೂ ಕಂದಾಯವನ್ನು ವಸೂಲು ಮಾಡದೆ ಕೋಟ್ಯಂತರ ರೂ.ಗಳ ಆದಾಯ ಗ್ರಾಮಪಂಚಾಯ್ತಿಗಳಿಗೆ ಸಿಗದಂತಾಗಿದೆ. ಸಾಕಷ್ಟು ಜನ ಸಿಬ್ಬಂದಿ ವರ್ಗದವರಿ ದ್ದರೂ, ಪ್ರತಿವರ್ಷವೂ ಕಂದಾಯ ವಸೂಲಾತಿಯಲ್ಲಿ ಬೇಜವಾಬ್ದಾರಿತನ ತೋರಿರುವುದರಿಂದಾಗಿ ಜಿಲ್ಲೆಯ 331 ಪಂಚಾಯ್ತಿಗಳಲ್ಲಿ ಸರಿ ಸುಮಾರು 15 ಕೋಟಿ ರೂ.ಗಳಿಗೂ ಹೆಚ್ಚು ಕಂದಾಯದ ಹಣ ವಸೂಲಾಗಿಲ್ಲ. ಗ್ರಾಮಪಂಚಾಯಿತಿಗಳು ಆರ್ಥಿಕವಾಗಿ ಸ್ವಾವಲಂಬನೆಯನ್ನು ಸಾಧಿಸಬೇಕಾದರೆ

> ಗ್ರಾಮಪಂಚಾಯಿತಿಗಳ ಆರ್ಥಿಕ ಸ್ವಾವಲಂಬನೆಗೆ ಪ್ರಮುಖ ಆಕರಗಳಾದ ಭೂಗಂದಾಯ..ಕಟ್ಟಡಗಳ ಮೇಲಿನ ಕರಗಳು..ಪಂಚಾಯಿತಿ ಕಟ್ಟಡಗಳ ಬಾಡಿಗೆ ಹಣ..ನೀರಿನ ಕರ..ಮತ್ತಿತರ ಆದಾಯದ ಮೂಲಗಳನ್ನು ಸಮರ್ಪಕವಾಗಿ ನಿಭಾಯಿಸದೆ ಹೋದಲ್ಲಿ ವರ್ಷದಿಂದ ವರ್ಷಕ್ಕೆ ವಸೂಲಾತಿಯ ಪಟ್ಟಿ ದೊಡ್ಡದಾಗಬಹುದೇ ಹೊರತು, ಪಂಚಾಯಿತಿಗಳಿಗೇನೂ ಲಾಭವಾಗದು.




ಪಂಚಾಯ್ತಿಗೆ ಬರಬೇಕಾದ ಎಲ್ಲಾ ರೀತಿಯ ಕರಗಳನ್ನೂ ವಸೂಲು ಮಾಡಬೇಕಾಗುತ್ತದೆ. ಕಳೆದ ವರ್ಷದ ಬಾಕಿಯೇ 11 ಕೋಟಿ ರೂ. ಗಳಿದ್ದು ಈ ಸಾರಿಯ ಬೇಡಿಕೆ 4 ಕೋಟಿಗೂ ಜಾಸ್ತಿಯಿದೆ.

**ಕೇವಲ ಮೂರು ಸಾವಿರ ಭೂಕಂದಾಯ ವಸೂಲಾತಿ:** ಪಾವಗಡ ತಾಲ್ಲೂಕಿನಲ್ಲಿರುವ 34 ಗ್ರಾಮಪಂಚಾಯಿತಿಗಳಲ್ಲಿ 32 ಪಿಡಿಓಗಳೂ, 53 ಜನ ಬಿಲ್‌ಕಲೆಕ್ಟರ್‌ಗಳೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರೆಲ್ಲರೂ ಸೇರಿ ಈ ಬಾರಿ ನಿವೇಶನಗಳು ಮತ್ತಿತರ ಭೂಮಿಯ ಮೇಲಿನ ಕರಗಳ ಬಾಬ್ತು 3 ಸಾವಿರ ರೂ.ಗಳ ತೆರಿಗೆ ರೂಪದಲ್ಲಿ ವಸೂಲು ಮಾಡಿರುವ ಅಂಕಿಅಂಶಗಳಿವೆ. ಒಬ್ಬ ವಾಟರ್ ಮನ್ ವೇತನವೇ ತಿಂಗಳಿಗೆ ಹತ್ತರಿಂದ ಹದಿನೈದು ಸಾವಿರ ರೂ.ಗಳಿದೆ. ಕನಿಷ್ಠಪಕ್ಷ ಅವರು ಪಡೆಯುವ ಸಂಬಳದಷ್ಟಾದರೂ ಕರ ವಸೂಲಾತಿ ಮಾಡದೆ ಹೋದರೆ ಪಂಚಾಯ್ತಿಯ ಆರ್ಥಿಕ ಸ್ಥಿತಿ ಹೇಗಿರಬೇಡ..!! ಪಾವಗಡ ತಾಲ್ಲೂಕಿನಲ್ಲಿ ಬಾಕಿ ಇರುವ ಭೂಮಿಯ ಮೇಲಿನ ತೆರಿಗೆ ಹಣದ ಮೊತ್ತ 5.5 ಕೋಟಿಯಷ್ಟಿದೆ. ಜನಪ್ರತಿನಿಧಿಗಳ ಜೊತೆ ಸಿಬ್ಬಂದಿ ವರ್ಗದವರೂ ಪಂಚಾಯ್ತಿಗಳಿಗೆ ಬರಬೇಕಾದ ತೆರಿಗೆ ಹಣದ ಬಗ್ಗೆ ಗಮನ ಹರಿಸದೆ ಇಷ್ಟೊಂದು ಹಣ ನೆನೆಗುದಿಗೆ ಬಿದ್ದಿದೆ.

**ಅತಿ ಹೆಚ್ಚು ಬಾಕಿ ತುಮಕೂರು ತಾಲ್ಲೂಕಿನಲ್ಲಿ:** ತುಮಕೂರು ತಾಲ್ಲೂಕಿನಲ್ಲಿ 41 ಗ್ರಾಮ ಪಂಚಾಯಿತಿಗಳಿವೆ. ಬಹುತೇಕ ಪಂಚಾಯ್ತಿಗಳು ನಗರದ ಅಕ್ಕಪಕ್ಕದಲ್ಲಿಯೇ ಇರುವುದರಿಂದ, ಇಲ್ಲಿ ಭೂಮಿಯ ಬೆಲೆಯೂ ಜಾಸ್ತಿ. ಹಾಗೆಯೇ ಮನೆಗಳ ನಿರ್ಮಾಣವೂ ಜಾಸ್ತಿಯೇ ಎನ್ನಬಹುದು. ಒಂದಲ್ಲಾ ಒಂದು ಕೆಲಸಕ್ಕೆ ಇಲ್ಲಿನ ನಾಗರಿಕರು ಗ್ರಾಮಪಂಚಾಯಿತಿಯನ್ನು ಅವಲಂಬಿಸಬೇಕಾದ ಅನಿವಾರ್ಯತೆಯಿದೆ. ಹಾಗಿದ್ದರೂ ಹಿಂದಿನಿಂದಲೂ ಬಾಕಿ ಉಳಿದ ನೆಲಗಂದಾಯದ ಮೊತ್ತ 5 ಕೋಟಿಗೂ ಜಾಸ್ತಿಯಿದೆ. ಈ ವರ್ಷದ ಬೇಡಿಕೆಯೂ ಸೇರಿ ತುಮಕೂರು ತಾಲ್ಲೂಕಿನಲ್ಲಿ 7 ಕೋಟಿ 80 ಲಕ್ಷ ರೂಪಾಯಿಗಳ ಭೂಕಂದಾಯ ವಸೂಲು ಮಾಡಬೇಕಿದೆ.ಆದರೆ ಇಲ್ಲಿಯತನಕ ಕೇವಲ 28 ಲಕ್ಷ ರೂಪಾಯಿಗಳ ಭೂಕಂದಾಯವನ್ನು ಪಂಚಾಯ್ತಿಗಳ ವತಿಯಿಂದ ವಸೂಲು ಮಾಡಲಾಗಿದೆ. ಅಂಕಿಅಂಶಗಳ ಆಧಾರದ ಮೇಲೆ ಇಷ್ಟು ಹಣ ಇದ್ದರೆ ಇನ್ನೆಷ್ಟು ಹಣ ಇತರೆ ಲೆಕ್ಕಗಳಲ್ಲಿದೆಯೋ ಈ ತಿಳಿಯದು. 39 ಪಿಡಿಒಗಳು, 33 ಜನ ಕಾರ್ಯದರ್ಶಿಗಳು, 17 ಜನ ದ್ವಿತೀಯ ದರ್ಜೆ ಸಹಾಯಕರು, 52 ಗಣಕಯಂತ್ರ ಸಹಾಯಕರು, 49 ಜನ ಕರ ವಸೂಲಾತಿದಾರರು ಹಾಗೂ 19 ಜನ ಗುಮಾಸ್ತರು ಹಾಲಿ ಗ್ರಾಮಪಂಚಾಯಿತಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ವಸೂಲಾಗದೆ ಉಳಿದ ಭೂಕಂದಾಯದ ಹಿಂದಿನ ಬಾಕಿ 75.47 ಲಕ್ಷ, ಇದಕ್ಕೆ ಈ ವರ್ಷದ

>>> 7ನೇ ಪುಟಕ್ಕೆ

## ಅಕ್ರಮವಾಗಿ ಮರಳು ಸಾಗಣೆ:

# ಆರೋಪಿಗೆ 3 ವರ್ಷ ಶಿಕ್ಷೆ

ತುಮಕೂರು

ಅಕ್ರಮವಾಗಿ ಕೆರೆ ಅಂಗಳದಲ್ಲಿ ಮರಳು ಸಂಗ್ರಹಣೆ ಮಾಡುತ್ತಿದ್ದ ಆರೋಪಿಗೆ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಂದ್ರ ಬಾದಾಮಿಕರ್ ಒಂದು ವರ್ಷ ಕಠಿಣ ಶಿಕ್ಷೆ ವಿಧಿಸಿ ಆದೇಶ ನೀಡಿದ್ದಾರೆ.

ಸಿರಾ ತಾಲ್ಲೂಕು ಹೊನ್ನಗೊಂಡನಹಳ್ಳಿ ಸರ್ಕಾರಿ ಕೆರೆ ಅಂಗಳದಲ್ಲಿ ಮರಳನ್ನು ಲಾರಿಯಲ್ಲಿ ತುಂಬಿಸಿ ಮಾರಾಟ ಮಾಡುತ್ತಿದ್ದ ಆರೋಪಿ ಹನು ಮಂತಯ್ಯ ಆರೋಪ ಸಾಬೀತಾದ ಕಾರಣ, ನ್ಯಾಯಾಲಯ ಆರೋಪಿ ಹನುಮಂತಯ್ಯಗೆ ಐಪಿಸಿ ಕಲಂ 379ರಡಿ ಒಂದು ವರ್ಷ ಕಠಿಣ ಶಿಕ್ಷೆ, 15 ಸಾವಿರ ದಂಡ, ದಂಡ ಕಟ್ಟಲು ತಪ್ಪಿದ್ದಲ್ಲಿ 3 ತಿಂಗಳ ಸಾದಾ ಸಜೆ ಮತ್ತು ಕಲಂ 4(1ಎ)ರೆ:ವಿ21(1) ಎಂಎಂಡಿಆರ್ ಅಪರಾಧಕ್ಕಾಗಿ 2 ವರ್ಷ ಕಠಿಣಶಿಕ್ಷೆ, 25 ಸಾವಿರ ದಂಡ, ದಂಡ ತಪ್ಪಿದ್ದಲ್ಲಿ 6 ತಿಂಗಳ ಸಾದಾ ಸಜೆ ವಿಧಿಸಲಾಗಿದೆ. ಪ್ರಕರಣದಲ್ಲಿ ಅಮಾನತ್ತುಪಡಿಸಿ ಮಾಲೀಕರಿಗೆ ಬಿಡುಗಡೆಗೊಳಿಸಿದ್ದ ವಾಹನವನ್ನು ಕಾನೂನಿನಡಿ ವಶಕ್ಕೆ ಪಡೆಯಲು ನ್ಯಾಯಾಧೀಶರು ಆದೇಶಿಸಿದ್ದಾರೆ. ಪ್ರಕರಣದಲ್ಲಿ ಸರ್ಕಾರದ ಪರವಾಗಿ ಆರ್.ಬಾಲಕೃಷ್ಣ ವಾದ ಮಂಡಿಸಿದ್ದರು.

# ಡಿ.4:ದ್ವಾರನಕುಂಟೆ ಎತ್ತಪ್ಪನ ಜಾತ್ರೆ

ಶಿರಾ

ತಾಲ್ಲೂಕಿನ ದ್ವಾರನಕುಂಟೆ ಶ್ರೀ ಎತ್ತಪ್ಪನ ಜಾತ್ರಾ ಮಹೋತ್ಸವವು ಡಿಸೆಂಬರ್ 4 ರಂದು ನಡೆಯಲಿದೆ. ಈ ಜಾತ್ರೆಯು ಗ್ರಾಮದಲ್ಲಿ ವಿವಿಧ ಆಚರಣೆಗಳನ್ನೊಳಗೊಂಡಂತೆ 5-6 ದಿನಗಳವರೆಗೆ ವಿಜೃಂಭಣೆಯಿಂದ ನಡೆಯಲಿದ್ದು, ಈ ಜಾತ್ರೆಗೆ ನೆರೆಯ ಹಿರಿಯೂರು, ಚಳ್ಳಕೆರೆ, ಮಡಕಶಿರಾ, ಹಿಂದೂಪುರ ಸೇರಿದಂತೆ ಅನೇಕ ಭಾಗಗಳಿಂದ ಭಕ್ತರು ಆಗಮಿಸುವರು.

ಎತ್ತಪ್ಪನ ಕಟ್ಟೆಗೆ ದ್ವಾರನಕುಂಟೆಯ ಎತ್ತಪ್ಪ ದೇವರುಗಳು ಹಾಗೂ ಹಿರಿಯೂರು ತಾಲ್ಲೂಕಿನ ವೇಣುಕಲ್ಲು ಗುಡ್ಡದ ಎತ್ತಪ್ಪ ದೇವರುಗಳ ಗಂಗಾಸ್ನಾನದ ನಂತರ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ಈ ಎರಡು ದೇವರುಗಳು ಎತ್ತಪ್ಪನ ಕಟ್ಟೆಗೆ ಆಗಮಿಸಿದಾಗ ಪಕ್ಕದ ಗ್ರಾಮಗಳಾದ ಲಕ್ಕವ್ವನಹಳ್ಳಿ, ಲಕ್ಕವ್ವನಹಟ್ಟಿ, ವಾಜರಹಳ್ಳಿ, ಕಾರೇಹಳ್ಳಿ, ನೇಜಂತಿ, ಸಕ್ರ, ಚಿನಕನಹಳ್ಳಿ, ದ್ವಾರನಕುಂಟೆ, ವೇಣುಕಲ್ಲುಗುಡ್ಡ, ಹೊಂಬಳದಹಟ್ಟಿ, ದ್ವಾರನಕುಂಟೆ ಪಾಳ್ಯ ಹಾಗೂ ಅಕ್ಕಪಕ್ಕದ ಗ್ರಾಮಗಳ ಭಕ್ತ ಸಮೂಹ ಈ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

**ರಸ್ತೆ ದುರಸ್ತಿಗೊಳಿಸಿ:** ಭಕ್ತಾದಿಗಳಿಗೆ ಸರಿಯಾದ ರಸ್ತೆ ಇಲ್ಲದೆ ಇರುವುದರಿಂದ ಬಹಳ ತೊಂದರೆಯಾಗುತ್ತಿದ್ದು, ಭಕ್ತಾದಿಗಳ ಹಿತದೃಷ್ಟಿಯಿಂದಲಾದರೂ ಈ ರಸ್ತೆಯನ್ನು ದುರಸ್ತಿಗೊಳಿಸುವಂತೆ ಈ ಮೂಲಕ ಮನವಿ ಮಾಡಿಕೊಂಡಿದ್ದಾರೆ.

30-11-2017.indd 2 11/30/2017 11:24:30 PM